# ಆಹಾ ಸುದ್ದಿ!

★ ಸಸಿತೋಟ



ಸ್ಪೇನಿನ ಬಿಲ್‌ಬಾವೊ ನಗರದಲ್ಲಿ ಇತ್ತೀಚೆಗೆ ಕೆಲವು ಯುವತಿಯರು ಮದುವೆ ಉಡುಪು ತೊಟ್ಟು ಕಿತ್ತಳೆ ಹಣ್ಣು ಹಂಚುತ್ತ ಹೋದರಂತೆ. ನಂತರ ತಮ್ಮನ್ನು ತಾವೇ ಮದುವೆಯಾದರಂತೆ. ಅಂದರೆ ಗಂಡು ಅಥವಾ ಬೇರೆ ಯುವತಿಯ ಹಂಗಿಲ್ಲದೇ 'ಹೌದು ನನ್ನನ್ನು ನಾನೇ ಪ್ರೀತಿಸುವೆ' ಎಂಬ ಹೊಸ ಪದ್ಧತಿ ಹುಟ್ಟಿಕೊಂಡಿದೆಯಂತೆ. ಮದುವೆ ಕೇಕ್‌ಗೂ, ಕಿತ್ತಳೆ ಹಣ್ಣಿಗೂ ಆಗಿ ಬರುವುದಿಲ್ಲ ಎಂಬ ಹೊಸ ವಿಷಯ ತಿಳಿದಂತಾಯ್ತು.

ಕರ್ನಾಟಕದಲ್ಲಿ ಅಲ್ಲಿ ಮತದಾನ.. ಇಲ್ಲಿ ಮತದಾನ ಎಂಬ ಸುದ್ದಿ ಬರುತ್ತಿದ್ದರೆ, ಬಾರ್ಸೆಲೋನಾದ ಕೆಟಲೋನಿಯಾದಲ್ಲೂ ಇತ್ತೀಚೆಗೆ ಮತದಾನ ನಡೆದ ಸುದ್ದಿ ಬಂದಿದೆ. ಆದರೆ ಮತದಾನ ನಡೆದಿದ್ದು ಮಹಿಳೆಯರು ಈಜುಗೊಳದಲ್ಲಿ ಟಾಪ್‌ಲೆಸ್ ಆಗಿ ಈಜಬಹುದಾ ಅಥವಾ ಬೇಡವಾ ಎಂಬುದರ ಬಗ್ಗೆ. ಕೊನೆಗೂ ಮಹಿಳೆಯರು ಗೆಲುವು ಸಾಧಿಸಿ ಟಾಪ್ ಲೆವಲ್‌ನಲ್ಲಿ ಬೀಗುತ್ತಿದ್ದಾರಂತೆ.

ಈ ಭಾರಿ ಗಾತ್ರದ ವ್ಯಕ್ತಿ ಅದೇನೋ ಕೆಲಸಕ್ಕೆ ಬಾರದ ವಸ್ತುಗಳನ್ನು ಒಯ್ಯುತ್ತಿದ್ದಾನಲ್ಲ ಎಂದು ಮೇಲ್ನೋಟಕ್ಕೆ ಎನಿಸಬಹುದು. ಆದರೆ ಬೆಲಾರಸ್‌ನಲ್ಲಿ ಕಳೆದ ವಾರ ನಡೆದ ಅಂತರರಾಷ್ಟ್ರೀಯ ಬಲಿಷ್ಠ ವ್ಯಕ್ತಿಗಳ ಪಂದ್ಯಾವಳಿಯಲ್ಲಿ ಈ ಸ್ಪರ್ಧಾಳು 330 ಕೆಜಿ ತೂಕದ ವಸ್ತುವನ್ನು ಸಲೀಸಾಗಿ ಎತ್ತಿಕೊಂಡು ಹೋದ. ಕೆಲವರು 17 ಟನ್ ತೂಕದ ಟ್ರಕ್ ಅನ್ನು ಕೈಯಲ್ಲಿ ಎಳೆದು ಹಾಕಿದರಂತೆ.





ಫ್ಯಾಷನ್ ಶೋನಲ್ಲಿ ಡ್ರೋನ್‌ಗೇನು ಕೆಲಸ? ಆದರೆ ಅರಬ್ ದೇಶವೊಂದರಲ್ಲಿ ನಡೆದ ಫ್ಯಾಷನ್ ಶೋನಲ್ಲಿ ರೂಪದರ್ಶಿಗಳ ಬದಲು ಡ್ರೋನ್ ಉಡುಪನ್ನು ಗಾಳಿಯಲ್ಲಿ ತೇಲಿಸುತ್ತ ಓಲಾಡಿತು. ರ್‍ಯಾಂಪ್‌ನಲ್ಲಿ ಬೆಕ್ಕಿನ ನಡಿಗೆ ಮಾಡುವ ರೂಪದರ್ಶಿಯ ಮೈ ಮೇಲಿಂದ ಉಡುಪು ಜಾರಿಬಿದ್ದರೆ ಅದನ್ನೇ ದೊಡ್ಡ ಸುದ್ದಿ ಮಾಡಬಹುದಿತ್ತು ಎಂದು ಕೈಕೈ ಹಿಸುಕಿಕೊಳ್ಳುವ ಮಾಧ್ಯಮದವರಿಗೆ ಇಲ್ಲೂ ಸಿಹಿ ಸುದ್ದಿಯೊಂದಿದೆ. ಸಿಗ್ನಲ್ ಕಡಿತವಾದರೆ ಡ್ರೋನ್ ಕೂಡ ಉಡುಪು ಜಾರಿಸಿ ಬಿಡುತ್ತದಂತೆ!

ಯಾವತ್ತಾದರೂ ನಿಮಗೆ ಸಾಯುವಷ್ಟು ಹಸಿವೆಯಾಗಿತ್ತಾ, ಅದರಿಂದ ಇನ್ನೊಬ್ಬರನ್ನು ಹುರಿದು ಮುಕ್ಕುವಷ್ಟು ಕೋಪ ಬಂದಿತ್ತಾ? ಅದೂ ಪೊಲೀಸರನ್ನು ಕರೆಯುವಷ್ಟು..! ಕೆನಡಾದಲ್ಲಿ ಮಹಿಳೆಯೊಬ್ಬಳು ಉಪಾಹಾರಗೃಹಕ್ಕೆ ಬಂದಿದ್ದಳಂತೆ. ತಾನು ಕೇಳಿದ್ದ ಪಿಜ್ಜಾ ಸಮಯಕ್ಕೆ ಸರಿಯಾಗಿ ನೀಡಲಿಲ್ಲ ಎಂದು ಪೊಲೀಸರ ಸಹಾಯವಾಣಿಗೆ ಫೋನ್ ಮಾಡಿದಳಂತೆ. ಪೊಲೀಸರೇನೋ ಸಮಯಕ್ಕೆ ಸರಿಯಾಗಿ ಬಂದರು. ಸಹಾಯವನ್ನೂ ನೀಡಿದರು. ತುರ್ತು ಸಹಾಯವಾಣಿಯನ್ನು ಯಾವಾಗ ಬಳಸಬೇಕು, ಬಳಸಬಾರದು ಎಂಬುದರ ಬಗ್ಗೆ ಉಪದೇಶ ಕೊಟ್ಟರಂತೆ.



ಕಳೆದ ವಾರ ಸಿಂಗಪುರದಲ್ಲಿ ಭೇಟಿಯಾದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉ.ಕೊರಿಯಾದ ಅಧ್ಯಕ್ಷ ಕಿಮ್ ಜಾಂಗ್–ಉನ್ ಮಾತುಕತೆ ಯಶಸ್ವಿಯಾಗಿದ್ದಕ್ಕೆ ಉದ್ಯಾನದಲ್ಲಿ ಥಕಥೈ ಎಂದು ಕುಣಿದರಾ? ಈ ಇಬ್ಬರೂ ಅಧ್ಯಕ್ಷರ ತದ್ರೂಪಿಗಳು ಅಲ್ಲಿಯ ಉದ್ಯಾನದಲ್ಲಿ, ಹಾದಿ–ಬೀದಿಗಳಲ್ಲಿ ಕುಣಿದುಕೊಂಡು ಓಡಾಡಿದಾಗ ಜನ ಮನರಂಜನೆ ಅನುಭವಿಸಿದ್ದಂತೂ ಹೌದು. ಒಳಗೂ ತಮಾಷೆ, ಹೊರಗೂ ತಮಾಷೆ.